**Assessed Buildings and Sites in Bangalore City*

436. SRI T. R. SHAMANNA (Fort)—

Will the Minister for Law and Municipal Administration be pleased to state :—

(*a*) the number of properties (lands and buildings) which have been assessed in the Bangalore City area;

(*b*) the details of demand, collections and balance with percentage for the past four years from 1971-1974;

(*c*) whether there are any unassessed and under assessed buildings in the City ?

SRI D. K. NAIKAR (Minister for Law and Municipal Administration) :—

(*a*) 1 29,308 assessed buildings and 20,069 assessed sites.

(*b*)—

Year	*Demand*	*Collection*	*Balance*	*Percentage*
1971-72	3,23,79,067	1,95 29,109	1,28,49,958	60
1972-73	2,77,89,626	2,14,33,509	63,56,117	77
1973-74	4,54,97,190	2,61,24,968	1,93,72,222	57
1974-75	4,85,13,412	1,67,50,038	3,17,63,374	34

For 9 months from 1-4-1974 to 31-12-1974

(*c*) Yes.

ಶ್ರೀ ಟಿ. ಆರ್. ಶಾಮಣ್ಣ :—ಇಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಬೇಡಿಕೆಯು 1972-73ರಲ್ಲಿ 2,77,89,626 ಇದ್ದರೆ 1973-74ರಲ್ಲಿ 4,54,97,190 ಎಂದು ಹೇಳಲಾಗಿದೆ. ಮತ್ತು 1971-72ರಲ್ಲಿ ಬೇಡಿಕೆ 3,23,79,067 ಎಂದು ಹೇಳಲಾಗಿದೆ. ಈ ರೀತಿ ಬೇಡಿಕೆಯು ಒಂದು ವರ್ಷದಲ್ಲಿ ಕಡಿಮೆಯಾಗಿ ಮತ್ತೊಂದು ವರ್ಷದಲ್ಲಿ ಜಾಸ್ತಿಯಾಗಲು ಕಾರಣವೇನು ಎಂಬುದನ್ನು ತಿಳಿಸುತ್ತೀರಾ ?

‡ಶ್ರೀ ಡಿ. ಕೆ. ನಾಯ್ಕರ್ :— ಮೌಲ್ಯ ನಿರ್ಧರಿಸಿದ ಹಾಗೂ ಕಡಿಮೆ ಮೌಲ್ಯ ನಿರ್ಧರಿಸಿದ ಪ್ರಕರಣಗಳೇ ಇದಕ್ಕೆ ಮೂಲ ಕಾರಣವಿರಬಹುದು;

ಶ್ರೀ ಟಿ. ಆರ್. ಶಾಮಣ್ಣ :— ಈಗ ಮುಂಬೈ ನಗರದಲ್ಲಿ ಬೆಂಗಳೂರು ನಗರಕ್ಕಿಂತ ಹೆಚ್ಚಿನ ತೆರಿಗೆ ಇದ್ದರೂ ಸಹ ಅಲ್ಲಿ 97 ಪರ್ಸೆಂಟ್‌ವರೆಗೆ ವಸೂಲಿಯಾಗುತ್ತಿದೆ; ಆದರೆ ನವ ಬೆಂಗಳೂರು ನಗರದಲ್ಲಿ 1973-74ರಲ್ಲಿ ಕೇವಲ 57 ಪರ್ಸೆಂಟ್ ವಸೂಲಿಯಾಗಿದೆ. ಇದಕ್ಕೆ ಕಾರಣವೇನು? ಇದನ್ನು ವಿಚಾರಣೆ ಮಾಡಿ ಸರಿಯಾಗಿ ವಸೂಲಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್ :— ಕಡಿಮೆ ವಸೂಲಾಗಿರುವ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಬಗ್ಗೆ ವಿಜಿಲೆನ್ಸ್ ಸೆಲ್ ಕ್ರಿಯೇಟ್ ಮಾಡಬೇಕು ಎನ್ನುವ ವಿಚಾರ ಕಾರ್ಪೊರೇಷನ್ ಮುಂದೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್ :—(ಸಿ) ಪ್ರಶ್ನೆಗೆ ಉತ್ತರ ಕೊಡುತ್ತಾ "ಇದೆ" ಎಂದು ಮಾತ್ರ ಹೇಳಿದ್ದೀರಿ ಅನ್ ಅಸೆಸ್ಡ್ ಎಷ್ಟಿವೆ, ಅಸೆಸ್ಡ್ ಎಷ್ಟಿವೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಡಿ. ಕೆ. ನಾಯ್ಕರ್ :— ಇದರಲ್ಲಿ ಅಸೆಸ್ಡ್ ಆದುದನ್ನು ನಾವು ತೋರಿಸಿದ್ದೇವೆ. ಅನ್‌ಅಸೆಸ್ಡ್ ಎಷ್ಟು ಎನ್ನುವುದು ನಿಗದಿಯಿಲ್ಲ. ಆದಕಾರಣ ಅನ್ ಅಸೆಸ್ಡ್‌ನ್ನು ನಾವು ಕೊಡಲಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್ ಕೃಷ್ಣನ್ —'ಎ' ಗೆ ಉತ್ತರವಾಗಿ ಅಸೆಸ್ ಆಗಿರುವುದು ಹೇಳಿದ್ದೀರಿ. ಅಸೆಸ್ ಆಗಿಲ್ಲದೆ ಇರುವುದು ಎಷ್ಟು, ಅಸೆಸ್ ಆಗಿರುವುದು ಎಷ್ಟು ಎರಡನ್ನೂ ಹೇಳಬೇಕು.

ಶ್ರೀ ಡಿ ಕೆ. ನಾಯ್ಕರ್ :—ಅನ್ ಅಸೆಸ್ಡ್ ಇದೆ ಎಂದು ಹೇಳಿದ್ದೇವೆ. ಈ ಬಗ್ಗೆ ಅಂಕಿಸಂಖ್ಯೆಗಳು ಇಲ್ಲ. ಅಸೆಸ್ಡ್ ಅಂಕೆಯನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿ — ಬಿ) ಪ್ರಶ್ನೆಗೆ ಉತ್ತರವಾಗಿ 1971-72ರಲ್ಲಿ 1 ಕೋಟಿ 28 ಲಕ್ಷ ಬ್ಯಾಲೆನ್ಸ್ ಇದೆ 1972-73 ರಲ್ಲಿ 2 ಕೋಟಿ 77 ಲಕ್ಷ ಡಿಮ್ಯಾಂಡ್ ಇದೆ ಎಂದು ತೋರಿಸಿರುತ್ತೀರಿ, ಹಾಗಾದರೆ ಬೆಂಗಳೂರು ಸಿಟಿ ಪರಿಯಾದಲ್ಲಿ 1 ಕೋಟಿ 50 ಲಕ್ಷ ಮಾತ್ರ ವರ್ಷ ವರ್ಷ ಕಂದಾಯ ವಸೂಲಾಗುತ್ತಿದೆ ಎಂದು ಭಾವನೆ ಮಾಡಿಕೊಳ್ಳೋಣವೇ?

ಶ್ರೀ ಡಿ. ಕೆ ನಾಯ್ಕರ್ :— ಶ್ರೀ ಟಿ. ಆರ್. ಶಾಮಣ್ಣನವರು ಕೇಳಿದ ಪ್ರಶ್ನೆಗೆ 1971-72ರಲ್ಲಿ ಡಿಮ್ಯಾಂಡ್ 3 ಕೋಟಿ 23 ಲಕ್ಷ ಆಗಿದೆ, ಇದರಲ್ಲಿ ಕಲೆಕ್ಷನ್ 1 ಕೋಟಿ 95 ಸಾವಿರ, ಬ್ಯಾಲೆನ್ಸ್ 1 ಕೋಟಿ 28 ಲಕ್ಷ ಉಳಿದಿದೆ ಎಂದು ಉತ್ತರದಲ್ಲಿ ಇದೆ. 1971-72ರಲ್ಲಿ 3 ಕೋಟಿ ಚಿಲ್ಲರೆ ಡಿಮ್ಯಾಂಡ್ ಇದ್ದರೆ 1972-73ರಲ್ಲಿ 2 ಕೋಟಿ 77 ಲಕ್ಷ ತೋರಿಸುತ್ತಾ ಇದ್ದೀರಿ. ಹೀಗೆ ಡಿಮ್ಯಾಂಡ್ ಕಡಿಮೆಯಾಗಲಿಕ್ಕೆ ಏನು ಕಾರಣವೆಂದು ಕೇಳಿದರು. ಏತಕ್ಕೆ ಕಡಿಮೆಯಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ.

SRI K. PUTTASWAMY :—It is so apparent on the face of it. Am I to understand that this aspect of it has not been gone into by your Department?

ಶ್ರೀ ಟಿ ಆರ್. ಶಾಮಣ್ಣ :— ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಸತ್ಯಕ್ಕೆ ದೂರವಾದುದು ಎಂದು ಗೊತ್ತಾಗುತ್ತದೆ. ನನ್ನ ಅಂದಾಜಿನಲ್ಲಿ ಸುಮಾರು ಬೆಂಗಳೂರಿನಲ್ಲೆ 10 ಸಾವಿರ ಮನೆಗಳಿಗೆ ಟ್ಯಾಕ್ಸ್ ಹಾಕಿಲ್ಲ ಮತ್ತು 35 ಪರ್ಸೆಂಟ್ ಮನೆಗಳಿಗೆ ಅನ್ ಅಸೆಸ್ ಆಗಿದೆ. ರಿವಿಶನ್ ಟೈಮ್‌ನಲ್ಲಿ ಸ್ಪೆಷಲ್ ರೆವಿನ್ಯೂ ಆಫೀಸರು 2 ಸಾವಿರದವರೆಗೆ ತೆಗೆದ ಕೊಂಡು ಟ್ಯಾಕ್ಸ್ ಕಡಿಮೆ ಮಾಡುತ್ತಾರೆ. ಯಾರು ಅನ್ಯಾಯ ಮಾಡುತ್ತಾರೆ, ಯಾರು ಅಕ್ರಮ ಮಾಡುತ್ತಾರೆ ಅಂಥವರಿಗೆ ನ್ಯಾಯವಾಗುತ್ತಾ ಇರುವುದರಿಂದ ರಿವಿಶನ್ ಟೈಮ್‌ನಲ್ಲಿ ಮತ್ತು ಅಸೆಸ್‌ಮೆಂಟ್ ಟೈಮ್‌ನಲ್ಲಿ ಸಾಕಾದಷ್ಟು ಎಚ್ಚರಿಕೆ ವಹಿಸಿ ಸರಿಯಾಗಿ ಕಂದಾಯವನ್ನು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಸಮಗ್ರವಾಗಿ ಪರಿಶೀಲನೆ ಮಾಡಿ ಟ್ಯಾಕ್ಸ್ ಹೆಚ್ಚು ಹಾಕುವುದಕ್ಕೆ ಬದಲಾಗಿ ಬರಬೇಕಾದುದನ್ನು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್ :—ವಿಷಯವನ್ನು ಪರಿಶೀಲನೆ ಮಾಡೋಣ.

**Hostels for S. C. Boys and Girls*

437. SRI T. R SHAMANNA (Fort)—

Will the Minister for Rural Development and Social Welfare be pleased to state :—

(*a*) the number of hostels for Scheduled Castes boys and girls that are in the State and number of boarders during this year in each hostel;